ಎಂದೂ ಯಾರಿಗೂ ಬಯಸಲಿಲ್ಲ, ತನ್ನ ಪಾಲಿಗೆ ಬಂದುದನ್ನು ತನ್ನ ಪಾಲಿನ ಕರ್ತವ್ಯವೆಂದೇ ಎಲ್ಲವನ್ನೂ ನೆರವೇರಿಸಿದಳು. ಅವಳು ಯಾರನ್ನೂ ದೂರುವುದಿಲ್ಲ" (ಕೃ.ಶ್ರೀ. ೭:೨೯೯) ಎಂದು ಸೀತೆಯ ಸ್ವಭಾವವನ್ನು ಕೊಂಡಾಡಿದ್ದಾರೆ. ಆದರ್ಶ ಸತಿಯಾಗಿದ್ದ ಸೀತೆ ಯಾವಾಗಲೂ ರಾಮನ ಮತ್ತು ಅವನ ಪ್ರಜೆಗಳ ಯೋಗಕ್ಷೇಮವನ್ನು ತನ್ನ ಕರ್ತವ್ಯವೆಂದೇ ತಿಳಿದು ಅವರಿಗಾಗಿ ಅನುದಿನವೂ ಪ್ರಾರ್ಥಿಸುತ್ತಿದ್ದಳು.

ಹಾಗೆಯೇ ರಾಮನೂ ಪ್ರಜೆಗಳ ದುಃಖದಲ್ಲಿ ತಾನೂ ದುಃಖಿಯಾಗಿ, ಅವರು ಸಂಭ್ರಮದಿಂದ ನಲಿಯುವಾಗ ತಾನೂ ಅವರ ಆನಂದದಲ್ಲಿ ಪಾಲುಗಾರನಾಗುತ್ತಿದ್ದ; ಅಯೋಧ್ಯೆಯ ಜನರ ಕ್ಷೇಮವನ್ನು ಪ್ರತಿದಿನವೂ ತಿಳಿದುಕೊಳ್ಳುತ್ತಿದ್ದ. ಅಯೋಧ್ಯೆಯ ಜನರಲ್ಲಿ ಎಷ್ಟು ಪ್ರೀತಿಯೋ ಅಷ್ಟೇ ಪ್ರೀತಿ ಕಿಷ್ಕಿಂಧೆಯ ವಾನರರಲ್ಲೂ ಅವನಿಗೆ ಇತ್ತು. ಅವರನ್ನೂ ಸ್ವಜನರೆನ್ನುತ್ತಾನೆ ರಾಮ (ಯುದ್ಧಕಾಂಡ, ೧೭.೨೫).

ಇಂಥ ರಾಮನನ್ನು ಕಾಣಲು ಪ್ರಜೆಗಳಲ್ಲಿ ಕಾತರ ತವಕ ಇದ್ದರೆ ಅದರಲ್ಲಿ ಆಶ್ಚರ್ಯವೇನು! ರಾಮನನ್ನು ಕಾಣಲಾಗದ ತಮ್ಮನ್ನೂ, ತಮ್ಮ ಜೀವಿತವನ್ನೂ ಅವರು ಬಹುವಾಗಿ ನಿಂದಿಸಿಕೊಳ್ಳುತ್ತಿದ್ದರು (ಅಯೋಧ್ಯಾಕಾಂಡ, ೧೭. ೧೪-೧೫).

ರಾಮನ ಧರ್ಮಪರಾಯಣತೆ, ಸತ್ಯನಿಷ್ಠೆ, ಶುದ್ಧ ತ್ಯಾಗಮಯ ಆಡಳಿತ ಎಂದೆಂದಿಗೂ ಆದರ್ಶವಾದದ್ದು. ಇದರಿಂದಾಗಿ, ರಾಮನ ರಾಜ್ಯಭಾರದಲ್ಲಿ ಕಳ್ಳಕಾಕರ ಭೀತಿ, ದುಷ್ಟರಿಂದ ಹಿಂಸೆ, ಪ್ರಾಕೃತಿಕ ಕ್ಷೋಭೆಯಿಂದ ತೊಂದರೆ – ಇವು ಯಾವುವೂ ಇರಲಿಲ್ಲ. ಎಲ್ಲರೂ ಸುಖ ಶಾಂತಿ ನೆಮ್ಮದಿಗಳಿಂದ, ತಮ್ಮ ತಮ್ಮ ಧರ್ಮದಲ್ಲಿ ನಿರತರಾಗಿ ಜೀವನ ನಡೆಸುತ್ತಿದ್ದರೆಂಬ ವಿವರಣೆ ರಾಮಾಯಣದಲ್ಲಿದೆ.

ಹೀಗೆ ರಾಮಾಯಣವು ಜೀವನದ ಎಲ್ಲ ಹಂತಗಳಲ್ಲಿಯೂ ಆಚರಿಸಬೇಕಾದ ಉನ್ನತ ನೀತಿಚರ್ಯೆಯನ್ನು ನಿರೂಪಿಸುತ್ತದೆ. ನೇರವಾಗಿ ಅದು, "ಹೀಗೆ ಮಾಡಿ, ಹೀಗೆ ಮಾಡಬೇಡಿ" ಎಂದು ಏನನ್ನೂ ಬೋಧಿಸುವುದಿಲ್ಲ. ಪರೋಕ್ಷವಾಗಿ ಅದು ನಮ್ಮ ಹೃದಯ ಪರಿವರ್ತನೆಯನ್ನು ಮಾಡುತ್ತದೆ. ಮನೋಹರವಾದ ಈ ಕಥೆಯನ್ನು ಓದುತ್ತಾ, ಆಯಾ ಪ್ರಸಂಗಗಳನ್ನು ಅಂತರಂಗದಲ್ಲಿ ಭಾವಿಸುತ್ತಾ, ನಮ್ಮೊಳಗೆ ನಾವೇ ಸದಸದ್ವಿವೇಕವನ್ನು ಹೊಂದುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. ಈ ಪಾತ್ರಗಳ ಉದಾತ್ತ ಜೀವನ, ಒಂದು ಧ್ಯೇಯಕ್ಕಾಗಿ ಅನೇಕ ರೀತಿಯ ಸಂಕಷ್ಟಗಳನ್ನು ಸಹಿಸುವ ಸ್ಥೈರ್ಯ, ದೃಢವಾದ ಶ್ರದ್ಧೆ ಮುಂತಾದವು, "ಎಂತಹ ಮಹಾನು ಭಾವರಿವರು! ಇದು ಅನುಕರಣೀಯ" ಎಂಬ ಆಶ್ಚರ್ಯ ಆನಂದಗಳ ಭಾವವನ್ನು ನಮ್ಮೊಳಗೆ ಹೊಮ್ಮಿಸಿ, ಬುದ್ಧಿ ಮನಸ್ಸು ಹೃದಯಗಳನ್ನು ವಿಕಾಸಗೊಳಿಸುತ್ತದೆ; ಉನ್ನತ ಧ್ಯೇಯಕ್ಕಾಗಿ ಶ್ರಮಿಸುವಂತೆ ನಮ್ಮನ್ನು ಹುರಿದುಂಬಿಸುತ್ತದೆ. ★

## ಕನ್ನಡ ರಾಮಾಯಣ ~ ತೊರವೆ ರಾಮಾಯಣ

ತೊರವೆಯ ರಾಮಾಯಣವು ಐದು ಸಹಸ್ರಕ್ಕೂ ಹೆಚ್ಚು ಪದ್ಯಗಳನ್ನು ಒಳಗೊಂಡಿರುವ ಬೃಹತ್ಕಾವ್ಯ. ರಾಮಾಯಣದ ಆರು ಕಾಂಡಗಳಲ್ಲಿ ಐದು ಕಾಂಡಗಳ ಕಥೆ ಕಾವ್ಯದ ಪೂರ್ವಾರ್ಧದಲ್ಲಿ ನಿರೂಪಿತವಾಗಿದೆ. ಉಳಿದ ಅರ್ಧದಷ್ಟನ್ನೂ ಯುದ್ಧಕಾಂಡವೊಂದೇ ಆಕ್ರಮಿಸಿದೆ. ಇದನ್ನು ಬರೆದವನು ಕುಮಾರವಾಲ್ಮೀಕಿ. ಈತನ ಭಾಷೆ ಸರಳ; ನಿರೂಪಣೆಯಲ್ಲಿ ನಿರರ್ಗಳವಾದ ಓಟವಿದೆ, ಶೈಲಿಯಲ್ಲಿ ಪ್ರಸಾದಗುಣವಿದೆ.

ಕವಿಯು ಕುಮಾರವ್ಯಾಸನ ಉಗ್ರಾಣಕ್ಕೆ ಕನ್ನಹಾಕಿದ್ದಾನೆ, ಅದರಿಂದ ತುಷ್ಟಿ ಪುಷ್ಟಿಗಳನ್ನು ಪಡೆದಿದ್ದಾನೆ. ಆದರೆ ಅಲ್ಲಿನ ದರ್ಶನ ಧ್ವನಿಗಳು ಇಲ್ಲಿ ಇಲ್ಲ. ಈತನ ಕಾವ್ಯವಾಹಿನಿ ಸಮತಳ ಪ್ರದೇಶದಲ್ಲಿ ಜುಳುಜುಳು ನಿನಾದದಿಂದ ಹರಿವ ಕಿರುದೊರೆಯೇ ಹೊರತು ಮಹಾನದಿಯಲ್ಲ. ಒಡವೆಯು ದಿವ್ಯಕಲೆಯನ್ನು ಪಡೆದಿಲ್ಲದಿದ್ದರೂ ಅದನ್ನು ಮಾಡಿದುದು ಬಂಗಾರದಲ್ಲಿ ಆದಾಗ, ಬಂಗಾರದ ಬೆಲೆಗೇನೂ ಲೋಪವಿಲ್ಲವಲ್ಲ?

ಕವಿಯು ಮಹಾಕವಿಯಲ್ಲದಿದ್ದರೂ ಭಕ್ತಕವಿ. ವಾಲ್ಮೀಕಿಯು ಅದ್ವಿತೀಯನಾದ ಮಾನವಶ್ರೇಷ್ಠನನ್ನು ಶ್ರೀರಾಮನಲ್ಲಿ ಕಂಡಿದ್ದರೆ ಕುಮಾರವಾಲ್ಮೀಕಿಯು ಆತನಲ್ಲಿ ದೇವತ್ವದ ಆವಾಹನೆಯನ್ನು ಮಾಡಿದ್ದಾನೆ. ಈ ಕಥೆಯನ್ನು ಶಿವನು ಪಾರ್ವತಿಗೆ **'ಪರಮ ಮಂಗಳನಾಮ, ನಿರುಪಮ ನಿಗಮ ವಿಶ್ರಾಮ'** ಎಂದು ಹೇಳಿ ನಿರೂಪಿಸುತ್ತಾನೆ. ಆಕೆ **'ಪುಳುಕಿತರೋಮಹರುಷಿತೆ'**ಯಾಗಿ ಕೇಳುತ್ತಾಳೆ.

ಕುಮಾರವ್ಯಾಸನಂತೆ ಕುಮಾರವಾಲ್ಮೀಕಿಯೂ ತನ್ನ ಕಾವ್ಯದಲ್ಲಿ **'ಪರಮಭಕ್ತಿಯೊಳಾವನೊಂದಕ್ಷರವ ಕೇಳ್ದ ನರಂಗೆ ಪಾತಕ ಹರಿವುದು', 'ಕೊಡುವುದಚ್ಯುತಪದವ ಪರದಲಿ'** ಎಂದು ಹೇಳಿದ್ದಾನೆ. ಆದ್ದರಿಂದ ಜನಸಾಮಾನ್ಯರು ಈತನ ಕಾವ್ಯ ಪಠಣದಿಂದ ಮೇಲ್ಮೆಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ. ಕುಮಾರವ್ಯಾಸನು ಶ್ರೀಕೃಷ್ಣನ ಹೆಸರನ್ನು ಎತ್ತಿಕೊಳ್ಳುತ್ತಲೆ ಮೈಮರೆಯುವಂತೆ, ಕುಮಾರವಾಲ್ಮೀಕಿಯು ರಾಮನ ಅಥವಾ ಸೀತೆಯ ಹೆಸರಿನೊಡನೆ ಭಕ್ತಿಪರವಶನಾಗಿ ಹಾಡುತ್ತಾನೆ.

ಕವಿಯು ಸೀತೆಯನ್ನು ರಾಜಕುಮಾರಿಯೆಂದು ಭಾವಿಸಿಲ್ಲ. ಆಕೆ ಸಾಕ್ಷಾತ್ ಲಕ್ಷ್ಮಿ; **'ಲೋಕದ ಮಹಾಮಾಯಾವಿನೋದೆ,' 'ವಿಶ್ವಮಾತೆ.'** ಇನ್ನು ರಾಮನಂತೂ ಸರಿಯೆ ಸರಿ. **'ಜಾತಹಿತನು ಜನಿಸಿದನು ಖದ್ಯೋತ ಕುಲದಲಿ.'** ಆತನು ಗರ್ಭದಲ್ಲಿರುವಾಗ **'ನಿಖಿಳ ದಿವಿಜ ಕದಂಬ ಬಂದೋಲೈಸುತಿರ್ದುದು ದಿವಸ ದಿವಸದಲಿ'**. ಹೀಗೆ ಅಲೌಕಿಕದ ಪ್ರಭಾವಲಯದಲ್ಲಿಯೇ ಮುಂದುವರಿಯುತ್ತದೆ, ಶ್ರೀರಾಮನ ಪಾತ್ರ.

ಇಂತಹ ಅಪ್ರಾಕೃತ ಪಾತ್ರಗಳ ಪುಣ್ಯಚರಿತ್ರೆಯಾದುದರಿಂದ ಇದು ಜನಸಾಮಾನ್ಯರ ಹೃದಯಕ್ಕೆ ಇಂಪನ್ನೂ ತಂಪನ್ನೂ ಕೊಡಬಲ್ಲದು.

**– ಶ್ರೀ ತ.ಸು.ಶಾಮರಾಯರು**

(ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೫೦-೩೫೧)

# ಅಧ್ಯಯನಶೀಲತೆ

ಡಾ. ಪಾಂಡುರಂಗ ವಿಠಲ

**ಮ**ಕ್ಕಳು ತಾವೇ ಓದಿಕೊಳ್ಳುವ ಅಭ್ಯಾಸ ಬೆಳೆಸುವಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಇಂದು ವಿಫಲವಾಗಿದೆ. ಮಗುವನ್ನು ಪಾಸು ಮಾಡದಿದ್ದರೆ ಅದು ಶಾಲೆಯನ್ನು ಬಿಡುತ್ತದೆಂದು ಯಾರೋ ಶಿಕ್ಷಣ ತಜ್ಞರು ಕಂಡುಕೊಂಡರು. ಆದ್ದರಿಂದ ಇಡೀ ವ್ಯವಸ್ಥೆ ಎಲ್ಲರನ್ನೂ ಪಾಸು ಮಾಡಿಸುವತ್ತಲೇ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಗ್ರೇಡಿಂಗ್ ಪದ್ಧತಿ ಇಂದು, ಫೇಲಾಗಬಲ್ಲವರು, ಪಾಸು ಮತ್ತು ಫಸ್ಟ್ ಕ್ಲಾಸ್ ಅಥವಾ C, B, A ಗಳಲ್ಲಿದ್ದು, ಮಗುವಿನ ಸಾಧನೆಯ ಸಂತೋಷವನ್ನು ಕಿತ್ತುಕೊಂಡಿದೆ. ನಿಯಮದ ಪ್ರಕಾರ ಹತ್ತನೆಯ ತರಗತಿಯವರೆಗೆ ಯಾರನ್ನೂ ಫೇಲ್ ಮಾಡುವಂತೆಯೇ ಇಲ್ಲ! ಇನ್ನೂ ಮುಂದುವರಿದು, ಶಿಕ್ಷಣತಜ್ಞರು ಭವಿಷ್ಯದಲ್ಲಿ ಪರೀಕ್ಷೆಗಳನ್ನೇ ರದ್ದುಮಾಡುವ ಚಿಂತನೆಯನ್ನೂ ನಡೆಸಿದ್ದಾರೆ.

ಜೀವನ ನಡೆಸಲು ಸಾಮಾನ್ಯ ಪ್ರಜೆಗೆ ಎಷ್ಟು ಶಿಕ್ಷಣ ಬೇಕು ಎಂದು ನಿರ್ಧರಿಸದಿರುವುದೇ ಈ ಪರಿಸ್ಥಿತಿಗೆ ಕಾರಣ. ಕೆಲ ವರ್ಷಗಳ ಹಿಂದೆ, ಹಿರಿಯರು ಎಲ್ಲ ಮಕ್ಕಳಿಗೂ ಓದು, ಬರಹ, ಲೆಕ್ಕ ಇವುಗಳನ್ನು ಒಂದು ಮಟ್ಟದವರೆಗೆ ಕಲಿಸಿದರೆ ಸಾಕು, ಅನಂತರ ಆಸಕ್ತಿ ಇರುವವರು ತಾವೇ ಕಷ್ಟಪಟ್ಟು ಮುಂದಕ್ಕೆ ಓದುತ್ತಾರೆ ಎಂದು ಯೋಚಿಸಿದ್ದರು. ಓದದವರು ಪ್ರಾಥಮಿಕ ಶಾಲೆಯಲ್ಲೇ ಫೇಲಾಗುತ್ತಿದ್ದುದರಿಂದ, ಮಕ್ಕಳೂ ಕಷ್ಟಪಟ್ಟು ಕಲಿಯುತ್ತಿದ್ದರು. ಎಲ್ಲರೂ ಪಾಸಾಗುವುದಾದರೆ ವಿದ್ಯಾರ್ಥಿಗಳು ಏಕೆ ತಾನೇ ಕಷ್ಟಪಡಬೇಕು? ಉಪಾಧ್ಯಾಯರಾದರೂ ಏಕೆ ತಾನೇ ಕಲಿಸಬೇಕು?

ಅದಲ್ಲದೆ, ಈಗಿನ ಪರೀಕ್ಷೆಗಳಲ್ಲಿ ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವಂತವಾಗಿ ಅರ್ಥಮಾಡಿಕೊಂಡು ಬರೆಯುವ ಅಗತ್ಯವೇ ಇಲ್ಲ. ಉಪಾಧ್ಯಾಯರು ಪಠ್ಯಪುಸ್ತಕದಲ್ಲೇ ವಾಕ್ಯಗಳಿಗೆ ಬ್ರಾಕೆಟ್ ಹಾಕಿಸಿ, ಅದರ ಪಕ್ಕ, ಪ್ರಶ್ನೆಯ ಸಂಖ್ಯೆ ಬರೆಸುತ್ತಾರೆ. ಈ ವ್ಯವಸ್ಥೆಯಲ್ಲಿ ಅಧ್ಯಯನಶೀಲತೆಗೆ ಬೆಲೆಯೇ ಇಲ್ಲ. ಹೀಗಾಗಿ, ಪದವಿ ಮುಗಿಸಿದವರಿಗೂ ಭಾಷೆಯ ಮೇಲಾಗಲಿ, ವಿಷಯಗಳ ಮೇಲಾಗಲಿ ಪ್ರಭುತ್ವ ಪಡೆಯಲು ಆಗುತ್ತಿಲ್ಲ. ಪರೀಕ್ಷೆಗೆ ಒಂದೋ ಎರಡೋ ತಿಂಗಳಿರುವಾಗ ಜೆರಾಕ್ಸ್ ನೋಟ್ಸುಗಳನ್ನು, ಗೈಡುಗಳನ್ನು ಹಿಡಿದು ಓದಿ, ಹೇಗೋ ಪಾಸು ಮಾಡಿಬಿಡುವ ಸಂಪ್ರದಾಯ ಬೆಳೆದುಬಂದಿದೆ.

ಇಂಥ ಪರಿಸ್ಥಿತಿಯಲ್ಲೂ ಕೆಲವು ಮಕ್ಕಳು ಓದಿನ ರುಚಿ ಹತ್ತಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ಇಲ್ಲಿ 'ಓದು' ಎಂದರೆ ಪಠ್ಯಪುಸ್ತಕಗಳಿಗೆ ಸೀಮಿತವಾದದ್ದಲ್ಲ, ಸೃಜನಾತ್ಮಕ ಗ್ರಂಥಗಳನ್ನು ಆಸಕ್ತಿಯಿಂದ ಓದುವುದು. ಇಂತಹ ಅಧ್ಯಯನಶೀಲತೆ ಸಾಮಾನ್ಯ ಜ್ಞಾನವನ್ನು ವಿಸ್ತರಿಸುವುದಲ್ಲದೆ, ಒಬ್ಬ ವ್ಯಕ್ತಿಗೆ ತನ್ನ ಆಸಕ್ತಿಯ ಕ್ಷೇತ್ರದಲ್ಲಿ ತೀವ್ರವಾದ ಮುನ್ನಡೆ ಸಾಧಿಸಲು ನೆರವಾಗುತ್ತದೆ. ಅಧ್ಯಯನಶೀಲರಿಗೆ ಈಗ ಜಾರಿಯಲ್ಲಿರುವ ವ್ಯವಸ್ಥಿತ ಶಿಕ್ಷಣದ ಆವಶ್ಯಕತೆ ಪೂರ್ಣವಾಗಿಯೇನೂ ಬೇಕಾಗಿಲ್ಲ. ಜೀವನಕ್ಕಾಗಿ ಕಷ್ಟಪಡುತ್ತಲೇ ಅಂಥವರು ಜ್ಞಾನ ಸಂಪಾದಿಸಬಲ್ಲರು. ಕಾಲೇಜು ಮೆಟ್ಟಿಲು ಹತ್ತದ ಡಿ.ವಿ. ಗುಂಡಪ್ಪನವರು ಮತ್ತು ಶಿವರಾಮ ಕಾರಂತರು, ವಿಶ್ವವಿದ್ಯಾನಿಲಯಗಳೂ ಮಾಡಿ ಮುಗಿಸಲಾಗದಂಥ ಕಾರ್ಯಗಳನ್ನು ಮಾಡಿ ಮುಗಿಸಿದ್ದು ಹೀಗೆಯೇ ಅಲ್ಲವೇ!

ಸಾಧಾರಣ ಪರಿಸ್ಥಿತಿಯಲ್ಲಿ ಎಸ್.ಎಸ್.ಎಲ್.ಸಿ. ತಲುಪಿದ ನನ್ನ ಪರಿಚಿತ ವಿದ್ಯಾರ್ಥಿಯೊಬ್ಬ ಅಧ್ಯಯನಶೀಲನಾಗಲು, ಅವನು ಓದುತ್ತಿದ್ದ ಶಾಲೆಯಲ್ಲಿದ್ದ ಕೊರತೆಗಳೇ ಕಾರಣವಾದವು. ಆತನ ಸಮಾಜಶಾಸ್ತ್ರ ಅಧ್ಯಾಪಕಿಗೆ ಇತರ ಕೆಲಸಗಳ ಒತ್ತಡದಲ್ಲಿ ತರಗತಿಯನ್ನು ತೆಗೆದುಕೊಳ್ಳಲು ಆಗಲೇ ಇಲ್ಲ. ಟ್ಯೂಷನ್ನಿಗೆ ಹೋಗಲಾಗದ ಈತ ಅದನ್ನು ತಾನೇ ಓದಿಕೊಳ್ಳಬೇಕಾಯಿತು. ತನಗೆ ಸ್ವಂತ ಪುಸ್ತಕಗಳನ್ನು ಓದಬಲ್ಲ ಶಕ್ತಿ ಇದೆ ಎಂದು ಕಂಡುಕೊಂಡು ಬೆರಗಾದ ಇವನು, ಜನಪ್ರಿಯ ವಿಜ್ಞಾನದ ಪುಸ್ತಕಗಳನ್ನು ಓದಲಾರಂಭಿಸಿದ. ಅವನಿಗೆ ಭೌತಶಾಸ್ತ್ರ ಅಚ್ಚುಮೆಚ್ಚಾಯಿತು. ಟ್ಯೂಷನ್‌ರಹಿತ ಕಾಲೇಜು ನಮ್ಮದು ಎಂಬ ಹೆಗ್ಗಳಿಕೆಯಿಂದ ಆರಂಭವಾದ ಹೊಸ ಕಾಲೇಜಿನಲ್ಲಿ ಪಿ.ಯು.ಸಿ.ಗೆ ಸೇರಿ ಶ್ರಮಪಟ್ಟು ಓದಿದ. ಸಿ.ಇ.ಟಿ.ಯಲ್ಲಿ ಒಳ್ಳೆಯ ರ್‍ಯಾಂಕ್ ಪಡೆದು, ಇಂಜಿನಿಯರಿಂಗ್‌ಗೆ ಸೇರಿದ. ಆ ವಿಷಯದ ಜೊತೆಗೆ ಭೌತಶಾಸ್ತ್ರವನ್ನೂ ಎಡೆಬಿಡದೆ ಅಭ್ಯಾಸ ಮಾಡುತ್ತಿದ್ದಾನೆ. ಪುಸ್ತಕ ಓದುವುದೇ ಇವನ ಏಕೈಕ ಹವ್ಯಾಸ. ಹಿಂದೆ ಕಾಲೇಜುಗಳಲ್ಲಿ ಇಂಥವರೇ ತುಂಬಿದ್ದರು. ಈಗ ಅದು ತುಂಬಾ ಅಪರೂಪ.

ಉಪಾಧ್ಯಾಯರಿಗಂತೂ ಅಧ್ಯಯನಶೀಲತೆ ಅತ್ಯಗತ್ಯ. ಆದರೆ ಕ್ರಮೇಣ ಉಪಾಧ್ಯಾಯರೂ ಪಠ್ಯಪುಸ್ತಕಗಳನ್ನಲ್ಲದೆ ಬೇರೆ ಏನನ್ನೂ ಓದುವ ಹವ್ಯಾಸ ಇಟ್ಟುಕೊಳ್ಳದಿರುವುದು ಕಂಡುಬರುತ್ತಿದೆ. ಇದು ಬಹಳ ದುರದೃಷ್ಟದ ವಿಷಯ.

ಉಪಯೋಗಿಸದ ಯಾವ ಶಕ್ತಿಯೂ ನಶಿಸಿಹೋಗುವುದು ಪ್ರಕೃತಿಯ ಧರ್ಮ. ಬಹಳ ಕಾಲ ನಿಶ್ಚಲವಾಗಿಹೋಗುವ ಯಾವ ಅಂಗವಾದರೂ ತನ್ನ ಮೊದಲಿನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅಧ್ಯಯನಶೀಲತೆಯೂ ಹೀಗೆಯೇ. ಓದು ಎಂದರೆ ಬರಿ ಓದಲ್ಲ, ಬರವಣಿಗೆ ಅಂದರೆ ಬರಿ ಶಬ್ದಗಳ ಆಡಂಬರ ಅಲ್ಲ, ಕಣ್ಣು ಕಿವಿಗಳನ್ನು ತೆರೆದು ಜಗತ್ತನ್ನು ನೋಡುವ ದೃಷ್ಟಿಯನ್ನು ಅಧ್ಯಾಪಕ ನೀಡಬೇಕು. ಅಂತಹ ಶಕ್ತಿ ಬರುವುದು ಅಧ್ಯಯನಶೀಲನಾದ ಅಧ್ಯಾಪಕನಿಂದ ಮಾತ್ರ ಸಾಧ್ಯ. ಇಲ್ಲವಾದಲ್ಲಿ ಗುರು-ಶಿಷ್ಯ ಇಬ್ಬರೂ ಬರೀ ಪ್ರಶ್ನೆಗಳಿಗೆ ಉತ್ತರ ಜೋಡಿಸುವುದು ಹೇಗೆ ಎನ್ನುವ ಅಂಕಗಳಿಕೆಯ ಸ್ಪರ್ಧೆಯಲ್ಲಿಯೇ ನಿರತರಾಗುತ್ತಾರೆ. ಸೃಜನಾತ್ಮಕತೆಯನ್ನು ಕಳೆದುಕೊಂಡು, ಪರೀಕ್ಷೆಯೆಂಬ ಮಹಾಮೇಳದಲ್ಲಿ ಪಾಸುಮಾಡುವ ಕಾರ್ಯದಲ್ಲಿ, ತಮ್ಮ ಅಂತಃಸತ್ವವನ್ನೇ ಕಳೆದುಕೊಳ್ಳುತ್ತಾರೆ.

★